

ತಮಿಳುನಾಡಿನ ನಾಯನಾರ್ ಸಂತರು - ೯

# ಸುಂದರರ್ ಮತ್ತು ಪರವೈ ನಾಚಿಯಾರ್

ಕಥೆ : ಪರುತ್ತಿಯಾರ್ ಕೆ. ಸಂತಾನರಾಮನ್
ಚಿತ್ರ : ಶಂಕರ್





6
ಅಷ್ಟೇ ತಾನೆ? ಇಗೋ, ತೆಗೆದುಕೋ.
7
ಭಗವಂತ, ನನ್ನದೊಂದು ಸಣ್ಣ ಕೋರಿಕೆ. ನಿನ್ನ ಸ್ತುತಿ ಮಾಡುತ್ತಾ ನಾನು ಊರಿಂದೂರಿಗೆ ಹೋಗುತ್ತಿರುತ್ತೇನೆ. ಈ ನಾಣ್ಯವನ್ನೆಲ್ಲಾ ನಾನು ಹೇಗೆ ಹೊತ್ತುಕೊಂಡುಹೋಗಲಿ? ಅವನ್ನೆಲ್ಲಾ ನೀನು ಮಣಿಮುಕ್ತಾ ನದಿಯಲ್ಲಿ ಹಾಕಿ, ಅನಂತರ ತಿರುವಾವೂರಿನ ಕಮಲಾಲಯ ಪುಷ್ಕರಿಣಿಯಿಂದ ಅದನ್ನು ತೆಗೆಯುವಂತೆ ಮಾಡಿದರೆ ಒಳ್ಳೆಯದು.
ನಿನ್ನಿಚ್ಛೆಯಂತೆಯೇ ಆಗಲಿ.
8
ಸ್ನೇಹಿತನಂತೆ ಸುಂದರರ್ ಶಿವನನ್ನು ರೇಗಿಸತೊಡಗಿದರು.
ನಿನ್ನನ್ನು ಹೇಗೆ ನಂಬಲಿ? ನೀನು ಮಾಯಾಧೀಶ್ವರನಲ್ಲವೆ? ತಿರುವಾರೂರಿಗೆ ನಾಣ್ಯಗಳು ತಲುಪುವಾಗ ಅದು ಕೆಳದರ್ಜೆಯ ನಾಣ್ಯಗಳಾಗಿದ್ದರೆ?
ಅದಕ್ಕೆ ನಾನೇನು ಮಾಡಲಿ?
9
ಭಗವಾನ್, ನೀನು ನನಗೆ ನೀಡಿದ ನಾಣ್ಯಗಳಲ್ಲಿ ಕೆಲವನ್ನು ಇಟ್ಟುಕೊಳ್ಳುತ್ತೇನೆ. ಕಮಲಾಲಯ ಪುಷ್ಕರಿಣಿಯಿಂದ ನಾಣ್ಯಗಳನ್ನು ಹೊರತೆಗೆದ ನಂತರ, ಈ ನಾಣ್ಯಗಳೊಂದಿಗೆ ಅದನ್ನು ಹೋಲಿಸಿ ನೋಡುತ್ತೇನೆ.
ನಿನ್ನ ಮನಬಂದಂತೆ ಮಾಡು, ಗೆಳೆಯಾ!

10 ಹಲವು ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿದ ನಂತರ ಸುಂದರರು ತಿರುವಾವೂರಿಗೆ ಬಂದರು.






11 ಸುಂದರರು ಕಮಲಾಲಯ ಪುಷ್ಕರಿಣಿಗೆ ಇಳಿದು, ಹುಡುಕತೊಡಗಿದರು.




ಸುಂದರರು ಕೂಡಲೇ ಶಿವನ ಸ್ತುತಿಯೊಂದನ್ನು ಹಾಡಿದರು. ಆಗ ಅಲ್ಲಿ ಹಲವಾರು ಚಿನ್ನದ ನಾಣ್ಯಗಳಿಂದ ತುಂಬಿದ ಚೀಲಗಳು ಕಾಣಿಸಿಕೊಂಡವು.

12 ಆಗ ಅಲ್ಲಿ ವಿನಾಯಕನು ಚಿನ್ನದ ವ್ಯಾಪಾರಿಯ ವೇಷದಲ್ಲಿ ಕಾಣಿಸಿಕೊಂಡ. ಚಿನ್ನದ ನಾಣ್ಯಗಳ ಗುಣಮಟ್ಟವನ್ನು ಪರೀಕ್ಷೆ ಮಾಡುವುದಕ್ಕಾಗಿ ಅವನು ಆ ವೇಷದಲ್ಲಿ ಬಂದಿದ್ದ. ಸುಂದರರು ಅವನಿಗೆ ನಾಣ್ಯಗಳನ್ನು ಪರೀಕ್ಷಿಸಲು ಹೇಳಿದರು.








‘‘ಶ್ರದ್ಧೆ ಹೆಚ್ಚಾದರೆ, ಭಗವಂತನ ಮೇಲೂ ಶ್ರದ್ಧೆ ಹೆಚ್ಚುವುದು. ಶ್ರದ್ಧೆ ಯಾರಲ್ಲಿ ಕಡಿಮೆ ಇರುವುದೋ, ಅವರಿಂದ ಹೆಚ್ಚೇನನ್ನೂ ನಿರೀಕ್ಷಿಸಲಾಗದು.’’

— ಶ್ರೀರಾಮಕೃಷ್ಣರು